# ಏನಿದು ಬ್ಲೂ ವೇಲ್ ಗೇಮ್ಸ್?

★ ಲಾವಣ್ಯಗೌರಿ ವೆಂಕಟೇಶ್

ಇಂದಿನ ದಿನಗಳಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಯಾರ ಕೈಲಿ ನೋಡಿದರೂ ಏನಾದರೂ ಒಂದು ಗ್ಯಾಜೆಟ್ ಇದ್ದೇ ಇರುತ್ತದೆ. ಏನಿಲ್ಲದಿದ್ದರೂ ಮೊಬೈಲ್ ಫೋನ್ ಅಂತೂ ಪ್ರತಿಯೊಬ್ಬರೂ ಹಿಡಿದೇ ಇರುತ್ತಾರೆ. ಕೆಲವರ ಜೀವನದಲ್ಲಂತೂ ಮೊಬೈಲ್ ಫೋನ್ ಬದುಕಿನ ಅವಿಭಾಜ್ಯ ಅಂಗದಂತಾಗಿ ಬಿಟ್ಟಿದೆ. ಹಾಗೆಯೇ ಮೊಬೈಲ್ ಫೋನ್‌ನಲ್ಲಿ, ಕಂಪ್ಯೂಟರ್‌ನಲ್ಲಿ, ಟ್ಯಾಬ್ಲೆಟ್‌ಗಳಲ್ಲಿ ಗೇಮ್‌ಗಳನ್ನು ಆಡುವುದು ಅತೀ ಸಾಮಾನ್ಯವಾಗಿದೆ. ಮಕ್ಕಳನ್ನು ಸುಮ್ಮನಿರಿಸಲು ಪೋಷಕರೇ ಆಗಾಗ ಮೊಬೈಲ್ ಫೋನ್‌ಅನ್ನು ಮಕ್ಕಳ ಕೈಲಿಟ್ಟು ತಮ್ಮ ಪಾಡಿಗೆ ತಾವಿರುತ್ತಾರೆ. ಇನ್ನು ಹದಿ ಹರೆಯಕ್ಕೆ ಕಾಲಿಟ್ಟ ಮುಕ್ಕಾಲು ಪಾಲು ಮಕ್ಕಳು ತಮ್ಮದೇ ಆದ ಸ್ವಂತ ಮೊಬೈಲ್ ಫೋನ್‌ಅನ್ನು ಹೊಂದಿರುತ್ತಾರೆ. ದಿನದ ಬಹುಪಾಲು ಸಮಯ ಅದರೊಟ್ಟಿಗೇ ಕಳೆಯುತ್ತಾರೆ. ಅವರು ಆಡುವ ಆಟಗಳಲ್ಲಿ ಪೋಷಕರ ಗಮನಕ್ಕೆ ಬರುವ ಆಟಗಳೆಷ್ಟೋ? ಹಾಗೂ ಪೋಷಕರ ಗಮನಕ್ಕೆ ಬರದಂತೆ ಅವರಾಡುವ ಆಟಗಳೆಷ್ಟೋ? ಆಟ ಬರೀ ಆಟದಂತಿರದೆ ಜೀವಕ್ಕೇ ಕುತ್ತು ತರುವ ಆಟವಾದರೆ? ಹೌದು ಹುಡುಗಾಟ ಹೋಗಿ ದೊಡ್ಡಾಟವಾಗುವ ಆಟವೊಂದು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹರಿದಾಡುತ್ತಿದೆ. ಅದರ ಹೆಸರೇ –ಬ್ಲೂ ವೇಲ್.

### ಈ ಆಟ ಹೇಗೆ ಕಾರ್ಯ ನಿರ್ವಹಿಸುತ್ತದೆ?

ಎಲ್ಲಾ ಅಂತರ್ಜಾಲದ ಆಟಗಳಂತೆಯೇ ಈ ಆಟದಲ್ಲೂ ಹಲವಾರು ಹಂತಗಳಿವೆ. ಒಂದು ಹಂತವನ್ನು ಮುಗಿಸಿದ ನಂತರವಷ್ಟೇ ಮುಂದಿನ ಹಂತಕ್ಕೆ ಅವಕಾಶ. ಈ ಬ್ಲೂ ವೇಲ್ ಆಟದಲ್ಲಿರುವ ಹಂತಗಳ ಒಟ್ಟು ಸಂಖ್ಯೆ 50. ಒಂದೊಂದು ಹಂತದಲ್ಲೂ ಒಂದೊಂದು ಸವಾಲನ್ನು ಪೂರೈಸಬೇಕು. ಇದನ್ನು ಮೇಲ್ವಿಚಾರಕನೊಬ್ಬ ಗಮನಿಸುತ್ತಿರುತ್ತಾನೆ. ಒಂದು ಟಾಸ್ಕ್ ಆದ ತಕ್ಷಣ ಆ ಮೇಲ್ವಿಚಾರಕನಿಗೆ ಕೆಲಸ ಪೂರೈಸಿದ ವರದಿಯನ್ನು ಒಪ್ಪಿಸಬೇಕು. ಆ ಮೇಲ್ವಿಚಾರಕನಿಗೆ 'ಕ್ಯುರೇಟರ್' ಎಂದು ಕರೆಯುತ್ತಾರೆ.

ಈ ಆಟದಲ್ಲಿ ದಿನಕ್ಕೊಂದರಂತೆ ಸವಾಲುಗಳನ್ನು ನೀಡಲಾಗುವುದು. ಆಟದಲ್ಲಿ ಸವಾಲುಗಳನ್ನು ಪೂರ್ಣಗೊಳಿಸಿದ ತಕ್ಷಣ ಆಟಗಾರನ ಫೋಟೋವನ್ನು 'ಅಪ್‌ಲೋಡ್' ಮಾಡಬೇಕು. ಅದಕ್ಕೆ ಕ್ಯುರೇಟರ್ ಅಥವಾ ಮೇಲ್ವಿಚಾರಕನ ಸಮ್ಮತಿಯ ಮುದ್ರೆ ಬೀಳಬೇಕು. 49 ಸವಾಲುಗಳನ್ನು ಮುಗಿಸಿದ ನಂತರವೇ 50 ನೇ ಟಾಸ್ಕ್. ಆ 50 ನೇ ಸವಾಲು ಎಂದರೆ ಆಟಗಾರನ ಆತ್ಮಹತ್ಯೆ!

ಇದು ವಿಚಿತ್ರವಾದರೂ ಸತ್ಯ. ಒಮ್ಮೆ ಇದರ ಜಾಲದಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಏಕೆಂದರೆ ಆಟ ಶುರು ಮಾಡುವ ಮೊದಲೇ ಆಟಗಾರನ ಕೆಲವು ಮಾಹಿತಿಗಳು ಮೇಲ್ವಿಚಾರಕನ ಬಳಿ ಇರುತ್ತವೆ. ಈ ಆಟಕ್ಕೆ ಬಲಿಯಾದವರೆಲ್ಲ 12ರಿಂದ 18ರ ಹರೆಯದವರು. ಈ ಮಕ್ಕಳು ಹೆದರಿ ಮಧ್ಯದಲ್ಲಿ ಆಟವನ್ನು ನಿಲ್ಲಿಸುವಂತಿಲ್ಲ. ಪೋಷಕರ ಬಳಿ ವಿಷಯ ಹೇಳಲೂ ಹಿಂಜರಿಯುತ್ತಾರೆ. ಅದಕ್ಕೂ ಕಾರಣವಿದೆ: 'ಈ ರೀತಿ ಮಧ್ಯದಲ್ಲಿ ಆಟವನ್ನು ನಿಲ್ಲಿಸಿದರೆ, ನಮ್ಮ ಗುಂಪಿನ ಸದಸ್ಯರು ನೀವೆಲ್ಲೇ ಇದ್ದರೂ ನಿಮ್ಮನ್ನು ಹಿಂಬಾಲಿಸಿ ಬರುತ್ತಾರೆ' ಎಂದು ಮೇಲ್ವಚಾರಕ ಬೆದರಿಕೆ ಒಡ್ಡುತ್ತಾನೆ.

### ಹೇಗೆ ಬಂತು ಈ ಹೆಸರು?

ಸಮುದ್ರ ತೀರಕ್ಕೆ ಬಂದು ಬೀಳುವ ತಿಮಿಂಗಿಲಗಳಿಗೆ 'ಬೀಚ್ಡ್ ವೇಲ್' ಎಂದು ಕರೆಯುತ್ತಾರೆ. ಎಲ್ಲರಿಗೂ ತಿಳಿದಿರುವಂತೆ ತಿಮಿಂಗಿಲಗಳು ಜಲವಾಸಿ ಜೀವಿಗಳು. ಸಮುದ್ರದ ನೀರು ದೋಷಪೂರಿತವಾಗಿಯೋ ಅಥವಾ ಆಕಸ್ಮಾತ್ತಾಗಿ ಚಲಿಸುತ್ತಿರುವ ಹಡಗುಗಳಿಂದ ಗಾಯಗೊಂಡೋ ತಿಮಿಂಗಿಲಗಳು ಪರಿಸ್ಥಿತಿಗೆ ಹೊಂದಿಕೊಳ್ಳದೆ ದಿಕ್ಕು ತಪ್ಪಿ ಸಮುದ್ರದ ದಂಡೆಗೆ ಬಂದು ಬೀಳುತ್ತವೆ. ಈ ರೀತಿ ಸಮುದ್ರದ ತೀರಕ್ಕೆ ಬಂದು ಬಿದ್ದ ತಿಮಿಂಗಿಲಗಳು ನೀರಿಲ್ಲದೆ ಸಾಯುತ್ತವೆ. ಅವು ತೀರಕ್ಕೆ ಬಂದು ನೆಲೆ ನಿಂತವೆಂದರೆ ಅದು ಅವುಗಳ ಕೊನೆಯ ಕಾಲ ಎಂದರ್ಥ!

ಜೀವಿತದ ಕೊನೆಯಲ್ಲಿ ತಾವಾಗಿಯೇ ಬಂದು ನೀರಿಲ್ಲದ ತೀರಕ್ಕೆ ಬಿದ್ದು ಸಾಯುವ ನೀಲಿ ತಿಮಿಂಗಿಲಗಳ ಹೆಸರನ್ನು ಈ ಆಟಕ್ಕೆ ಇಟ್ಟಿದ್ದಾರೆ. ಒಂದು ರೀತಿಯಲ್ಲಿ ಈ ಬೀಚ್ಡ್ ವೇಲ್‌ಗಳದ್ದು ಸಹಾ ಆತ್ಮಹತ್ಯೆಯೇ!

### ಉದಯವಾದದ್ದು ಹೇಗೆ?

ರಷ್ಯಾ ದೇಶದ ಫಿಲಿಪ್ ಬುಡೈಕಿನ್ ಎಂಬ 21ರ ತರುಣನೊಬ್ಬ ಈ ಆಟವನ್ನು ತಾನು ಮೊದಲು ಕಂಡುಹಿಡಿದಿದ್ದಾಗಿ ಹೇಳಿಕೊಂಡಿದ್ದಾನೆ. ಸೈಕಾಲಜಿಯ ವಿದ್ಯಾರ್ಥಿಯಾಗಿದ್ದ ಈತನನ್ನು ಕಾಲೇಜಿನಿಂದ ಅಮಾನತುಗೊಳಿಸಲಾಗಿತ್ತು. ಈಗ ಪೋಲೀಸರ ಅತಿಥಿಯಾಗಿರುವ ಈತನ ಉದ್ದೇಶ ವಿಚಿತ್ರವಾಗಿದೆ. 'ಈ ಆಟದ ಮೂಲಕ ಅಪ್ರಯೋಜಕರನ್ನು ಆತ್ಮಹತ್ಯೆಯಿಂದ ಕೊನೆಗೊಳಿಸಿ, ಸಮಾಜವನ್ನು ಜೈವಿಕ ವಿಜ್ಞಾನದ ಕಸದಿಂದ ಸ್ವಚ್ಛಗೊಳಿಸುವುದು ನನ್ನ ಉದ್ದೇಶ' ಎಂದು ಆತ ಹೇಳಿಕೊಂಡಿದ್ದಾನೆ! 2013ರಲ್ಲಿ ಈತ 'ಎಫ್ 57' ಎಂಬ ಸಮುದಾಯವನ್ನು ಹುಟ್ಟು ಹಾಕಿದನು. ಈ ಗುಂಪಿನ ಮೂಲಕ ಈ ಆಟ ಎಲ್ಲೆಡೆ ಹರಡತೊಡಗಿತು. ಈ ಗುಂಪಿಗೆ 'ಡೆತ್ ಗ್ರೂಪ್' ಎಂಬ ಹೆಸರೂ ಇದೆ.



ಮಾತನಾಡುತ್ತಾರೆ. ಯಾರ ಜೊತೆ ಸೇರುತ್ತಾರೆ, ಸೇರುವುದಿಲ್ಲ. ಅವರ ಮನೋಸ್ಥಿತಿ ಹೇಗಿದೆ ಗಮನಿಸಿ.

- ಓದು, ಕೋಚಿಂಗ್ ಕ್ಲಾಸ್‌ಗೆ ಹೋಗು. ಪರೀಕ್ಷೆಯಲ್ಲಿ 80–90 ಅಂಕಗಳನ್ನು ತೆಗಿ, ಯಾವುದೇ ಸ್ಪರ್ಧೆಯಲ್ಲಿ ಬಹುಮಾನ ಗಳಿಸು ಎಂದು ಅತಿಯಾದ ಒತ್ತಡ ಹಾಕಬೇಡಿ. ಅಂಕ ಗಳಿಸುವುದೇ ಜೀವನವಲ್ಲ. ಲೋಕ ಜ್ಞಾನ ಮುಖ್ಯ. ಅದನ್ನು ಕಲಿಸಿ.
- ಇಂಟರ್‌ನೆಟ್ ಕನೆಕ್ಷನ್ ಇರುವ ಮೊಬೈಲನ್ನು ಮಕ್ಕಳಿಗೆ ಕೊಡಲೇ ಬೇಡಿ. ನಿಮ್ಮ ಮನೆಯಲ್ಲಿ ಕಂಪ್ಯೂಟರ್ ಇದ್ದರೆ ಅದನ್ನು ಲಾಕ್ ಮಾಡಿ. ಇಂಟರ್ ನೆಟ್ ಬಳಕೆಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿ– ಸದ್ಬಳಕೆಯೇ ಹೊರತು ದುರ್ಬಳಕೆಯಲ್ಲ. ವಿಡಿಯೋ ಗೇಮ್ಸ್‌ಗಳನ್ನು ಬಂದ್ ಮಾಡಿ. ಅಥವಾ ಯಾವ ಗೇಮ್ ಆಡುತ್ತಾರೆಂಬ ಬಗ್ಗೆ ತೀವ್ರ ಗಮನ ಹರಿಸಿ.
- ನಿಮ್ಮ ಮಗ / ಮಗಳಿಗೆ ಆರೋಗ್ಯಕರ ಹವ್ಯಾಸಗಳನ್ನು ರೂಢಿ ಮಾಡಿಸಿ. ಸಂಗೀತ ಕೇಳಲಿ, ಕಲಿಯಲಿ, ನೃತ್ಯ ನೋಡಲಿ , ಮಾಡಲಿ, ಚಿತ್ರ ಬರೆಯಲಿ, ಪ್ರಕೃತಿ ರಮ್ಯ ಸ್ಥಳಕ್ಕೆ ಕರೆದೊಯ್ಯಿರಿ, ಪಶು ಪಕ್ಷಿ ಪ್ರಾಣಿಗಳನ್ನು ನೋಡಿ ಆನಂದಿಸಲಿ. ಮನೆಯಲ್ಲಿ ಮುದ್ದು ಪ್ರಾಣಿಗಳನ್ನು ಸಾಕಿ. ಅವುಗಳೊಂದಿಗೆ ಆಡಲು ಮಕ್ಕಳಿಗೆ ಪ್ರೋತ್ಸಾಹಿಸಿ.